# ಜೈನ್ ಕಾಲೇಜಿನಲ್ಲಿ ಸಾಹಿತ್ಯ ಮಂಥನ!

ಕನ್ನಡ ಸಾಹಿತ್ಯ-ಸಂಸ್ಕೃತಿಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಒಲವು ಮೂಡಿಸುವ ಸಲುವಾಗಿ ಜೈನ್ ಕಾಲೇಜು, ಆರ್ ಆರ್ ನಗರ ಸತತವಾಗಿ ಕನ್ನಡಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಈ ಬಾರಿ ವಿದ್ಯಾರ್ಥಿಗಳಲ್ಲಿನ ಬರವಣಿಗೆಯ ಕೌಶಲ್ಯವನ್ನು ಗುರುತಿಸಿ, ಪ್ರೋತ್ಸಾಹಿಸುವ ಸಲುವಾಗಿ **"ಮಂಥನ"** ಎಂಬ ಸಾಹಿತ್ಯೋತ್ಸವವನ್ನು ಹಮ್ಮಿಕೊಂಡಿತು.

ಈ ಅಂತರ ಕಾಲೇಜು ಸಾಹಿತ್ಯೋತ್ಸವಕ್ಕೆ ಕನ್ನಡದ ಹೆಮ್ಮೆಯ ಕವಿ, ಲೇಖಕರಾದ **ಡಾ. ಹೆಚ್.ಎಸ್. ವೆಂಕಟೇಶ್‌ಮೂರ್ತಿ** ಯವರು ಮುಖ್ಯ ಅತಿಥಿಯಾಗಿ ಆಗಮಿಸಿ, ಉತ್ಸವಕ್ಕೆ ಮತ್ತಷ್ಟು ಮೆರುಗನ್ನು ನೀಡಿದರು. **"ಕಾಲೇಜಿನ ತರಗತಿ ಅನ್ನೋದು ಅಧ್ಯಾಪಕರ ರಾಜ್ಯವಲ್ಲ. ವಿದ್ಯಾರ್ಥಿಗಳ ಅನಿಸಿಕೆಗಳನ್ನು ಅಭಿವ್ಯಕ್ತಿಗೊಳಿಸಲಿಕ್ಕೆ ಅವಕಾಶಕೊಡುವ ವೇದಿಕೆಯಾಗಬೇಕು. ಕನ್ನಡ ಕಲೆ, ಸಾಹಿತ್ಯ, ಸಂಸ್ಕೃತಿ ಮನೆ-ಮನ ತಲುಪುವಲ್ಲಿ ಇಂತಹ ಕಾರ್ಯಕ್ರಮಗಳು ಮುಖ್ಯ ಭೂಮಿಕೆಯನ್ನು ವಹಿಸುತ್ತವೆ. ಇಂತಹ ಕಾರ್ಯಕ್ರಮಗಳು ಇನ್ನಷ್ಟು, ಮತ್ತಷ್ಟು ಆಯೋಜಿಸಲ್ಪಡಬೇಕು. ವಿದ್ಯಾರ್ಥಿಗಳಲ್ಲಿನ ಸಾಹಿತ್ಯಾಭಿರುಚಿಯನ್ನು ಗುರುತಿಸಿ, ಪ್ರೋತ್ಸಾಹಿಸುವ ಕೆಲಸಗಳು ಪ್ರತಿ ಕಾಲೇಜಿನಲ್ಲೂ ನಡೆಯಬೇಕು."** ಎಂದು ಹೇಳಿದರು.

ಸ್ವರಚಿತ ಕವನ ರಚನೆ ಮತ್ತು ವಾಚನ, ಚಿತ್ರಸಂಚಯನ ಸ್ಪರ್ಧೆಗಳು ಕಾರ್ಯಕ್ರಮದ ಮುಖ್ಯ ಆಕರ್ಷಣೆಯಾಗಿದ್ದಲ್ಲದೇ, ವಿದ್ಯಾರ್ಥಿಗಳ ಕ್ರಿಯಾಶೀಲತೆಗೆ ಒಂದು ಉತ್ತಮ ವೇದಿಕೆಯನ್ನು ಕಲ್ಪಿಸಿಕೊಟ್ಟಿತು. ಜೈನ್ ಕಾಲೇಜು ವಿವಿಪುರಂ, ಎಂಇಎಸ್, ಕುಮರನ್ಸ್, ಕ್ರೈಸ್ಟ್ ಕಾಲೇಜು ಸೇರಿದಂತೆ 20ಕ್ಕೂ ಹೆಚ್ಚು ಉನ್ನತ ಶಿಕ್ಷಣ ಸಂಸ್ಥೆಗಳಿಂದ ಆಗಮಿಸಿದ 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಂಡರು.